**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ:** 511/2025

ಫ್ರಾಸಾ – 1

ಚಾಸಾ – 1

**ಸಾಕ್ಷಿಯು ದಿಃ 04.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ನಟರಾಜು |
| ತಂದೆಯ ಹೆಸರು | : | ಗುರುಮಲ್ಲಪ್ಪ |
| ವಯಸ್ಸು | : | 65 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಚೌಡಹಳ್ಳಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 2 ಮತ್ತು 3 ಗೊತ್ತು. ಚಾಸಾ 4 ನನ್ನ ಮಗ. ಆರೋಪಿ ಗೊತ್ತು, ನನ್ನ ತಮ್ಮನ ಮಗ. ನಾನು ಮತ್ತು ನನ್ನ ತಮ್ಮ ಸುಮಾರು 25 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದೇವೆ. ದಿನಾಂಕ 05.12.2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನನಗೆ ಸೇರಿದ ಹುಂಡಿಪುರ ಎಲ್ಲೆಯ ಸರ್ವೆ ನಂಬರ್ 168/2 ರಲ್ಲಿ ನಾನು ದನಗಳನ್ನು ಮೇಯಿಸುತ್ತಿದ್ದಾಗ, ನಮ್ಮ ಜಮೀನಿನಲ್ಲಿದ್ದ 50 ಬಾಳೆಗಿಡಗಳನ್ನು ಆರೋಪಿಯು ಮಚ್ಚಿನಿಂದ ಕತ್ತರಿಸಿ, ಎರಡು ಕಡೆಯ ಸೋಲಾರ್ ತಂತಿಯನ್ನು ಕಿತ್ತು ಹಾಕಿ ಬಾಳೆ ಗಿಡಗಳಿಗೆ ಹಾಕಿದ್ದ ಹನಿ ನೀರಾವರಿ ಪೈಪ್ ಗಳನ್ನು ಕಿತ್ತು ಹಾಕಿದರು. ಆಗ ಚಾಸಾ 2 ಮತ್ತು 3 ಅಲ್ಲಿಗೆ ಬಂದು ಯಾಕೆ ಈ ರೀತಿ ಮಾಡುತ್ತಿದ್ದೀಯಾ ಎಂದು ಕೇಳಿದರು, ಅದಕ್ಕೆ ಆರೋಪಿ ನನ್ನ ಜಮೀನು ಅದಕ್ಕೆ ಈ ರೀತಿ ಮಾಡಿದ್ದೇನೆ ಎಂದು ತಿಳಿಸಿರುತ್ತಾರೆ.

ಆರೋಪಿಯ ಸದರಿ ಕೃತ್ಯದಿಂದ ನನಗೆ ಸುಮಾರು 50,000/- ರೂಪಾಯಿ ನಷ್ಟವಾಗಿರುತ್ತದೆ. ಈ ಬಗ್ಗೆ ದಿನಾಂಕ 06.12.2022 ರಂದು ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು.

2. ದಿನಾಂಕ 07.12.12 ರಂದು ಪೊಲೀಸರು ಕೃತ್ಯ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷಿಯು 2 ಫೋಟೋಗಳಲ್ಲಿ ತಾನು ಇದ್ದೇನೆ ಎಂದು ನೋಡಿ ಗುರುತಿಸಿದ್ದು, ಆ ಬಗ್ಗೆ ಸಿಡಿ ಮತ್ತು ಕಲಂ 65(ಬಿ) ದೃಡೀಕರಣ ಪತ್ರ ಹಾಜರುಪಡಿಸದ ಕಾರಣ ನಿಶಾನೆಗೊಳಿಸಿರುವುದಿಲ್ಲ.

**ಪಾಟೀ ಸವಾಲು :- ಆರೋಪಿಯ ಪರ ವಕೀಲರಿಂದ**

ಚಾಸಾ 2 ಮತ್ತು 3 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ನನ್ನೊಂದಿಗೆ ಚೆನ್ನಾಗಿ ಇದ್ದಾರೆ ಎಂದರೆ ಸರಿ. ನಮಗೂ ಹಾಗೂ ಆರೋಪಿಗೂ ಮೊದಲಿನಿಂದಲೂ ಆಸ್ತಿ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸರಿ. ನನಗೆ ಓದಲು ಬರೆಯಲು ಬರುತ್ತದೆ. ದೂರನ್ನು ನಾನೇ ನನ್ನ ಮಗನ ಕೈಯಲ್ಲಿ ಬರೆಸಿರುತ್ತೇನೆ. ದೂರನ್ನು ನನ್ನ ಮಗ ಬರೆದಿರುವ ಕಾರಣ ಅದರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯು ಬಂದು ಬಾಳೆ ಗಿಡ ಕತ್ತರಿಸಿದರು ಎಂದು ಹೇಳುವ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ.

2. ಆರೋಪಿಯ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದೆ ಎಂದರೆ ಸರಿ. ಆರೋಪಿಯು ಸಹ ತಮ್ಮ ಜಮೀನಿಗೆ ತಂತಿ ವ್ಯವಸ್ಥೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನಗೆ ರೂ. 50 ಸಾವಿರ ನಷ್ಟ ಉಂಟಾಗಿದೆ ಎಂದು ಅಂದಾಜಿನ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿ. ಪಂಚನಾಮೆಗೆ 07.12.2022 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಒಬ್ಬರು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಪಂಚನಾಮೆಯನ್ನು ಪೊಲೀಸರು ಮಧ್ಯಾಹ್ನ 2.00 ರಿಂದ 2.30 ರ ಸಮಯಕ್ಕೆ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಸಾಕ್ಷಿಗಳನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ಆರೋಪಿಯು ಬಾಳೆ ಗಿಡಗಳನ್ನು ಕತ್ತರಿಸದೇ ಇದ್ದರೂ ಮತ್ತು ಸೋಲಾರ್ ತಂತಿಗಳನ್ನು ಕಿತ್ತು ಹನಿ ನೀರಾವರಿ ಪೈಪ್ ಗಳನ್ನು ಕಿತ್ತು ಹಾಕದೇ ಇದ್ದರೂ ಸಹ ಆರೋಪಿಯ ಮೇಲೆ ಇರುವ ವೈಶಮ್ಯದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಸಾಕ್ಷಿಗಳು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ